ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 02-02-1976--ಪಾರ್ಟ್-2

# *ಭಕ್ತರು ಮತ್ತು ಪಾಂಡವರ ಲೆಕ್ಕಪತ್ರ*

(भक्तों और पाण्डवों का पोतामेल)

**ಭಕ್ತರಿಗೆ ಭಕ್ತಿಯ ಫಲವನ್ನು ಕೊಡುವ ಭಗವಂತನು ಮತ್ತು ಪಾಂಡವರಿಗೆ ವಿಶ್ವ ಪರಿವರ್ತನಾರ್ಥ ಶಕ್ತಿಯನ್ನು, ಪ್ರೀತಿಯನ್ನು ಮತ್ತು ಸಹಯೋಗವನ್ನು ಕೊಡುವ ಆತ್ಮಿಕ ತಂದೆ ಶಿವಬಾಬಾ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾರವರು ತನ್ನ ಮೂರುಪ್ರಕಾರದ ಮಕ್ಕಳ ಲೆಕ್ಕಪತ್ರವನ್ನು ನೋಡುತ್ತಿದ್ದಾರೆ. ಆ ಮೂರುಪ್ರಕಾರ ಯಾವುದಾಗಿದೆ? ಮುಖವಂಶಾವಳಿ ಬ್ರಾಹ್ಮಣರು, ಅವರು ಬಾಪ್‌ದಾದಾರವರ ಜೊತೆಜೊತೆಗೆ ಹೊಸ ಪ್ರಪಂಚದ ಸ್ಥಾಪನಾ ಕಾರ್ಯದಲ್ಲಿ ಸಹಯೋಗಿ ಯಾಗಿರುತ್ತಾರೆ. ಎರಡನೆಯವರು- ಬಾಪ್‌ದಾದಾರವರ ಹಾಗೂ ಬಾಹಣರ ಸ್ಮರಣೆಯಲ್ಲಿ ಅಥವಾ ಕೂಗುವುದರಲ್ಲಿ ಸದಾ ಮಸ್ತರಾಗಿರುವಂತಹ ಭಕ್ತರು. ಮೂರನೆಯವರು – ಹಳೆಯ ಪ್ರಪಂಚದ ಪರಿವರ್ತನೆ ಮಾಡುವುದಕ್ಕಾಗಿ ನಿಮಿತ್ತರಾಗಿರುವ ಯಾದವರು. ಈ ಮೂವರ ಸಂಬಂಧದಿಂದ ಸ್ಥಾಪನಾ ಕಾರ್ಯವು ಸಂಪನ್ನವಾಗುತ್ತದೆ. ಆದ್ದರಿಂದ ಮೂವರ ಕಾರ್ಯಗಳ ಲೆಕ್ಕಪತ್ರವನ್ನು ನೋಡುತ್ತಿದ್ದಾರೆ. ಅಂದಮೇಲೆ ಏನು ನೋಡಿದೆವು? ಕಾರ್ಯಾರ್ಥವಾಗಿ ನಿಮಿತ್ತವಾಗಿರುವಂತಹ ಮೂರುಪ್ರಕಾರದ ಮಕ್ಕಳು ಅವಶ್ಯವಾಗಿ ತಮ್ಮ-ತಮ್ಮ ಕಾರ್ಯದಲ್ಲಿ ತೊಡಗಿದ್ದಾರೆ ಆದರೆ ಮೂವರೂ ಕಾರ್ಯಕರ್ತರು ಕಾರ್ಯದಲ್ಲಿ ಎಲ್ಲಿಯವರೆಗೆ ತೀವ್ರತೆಯಲ್ಲಿ ಅತಿಯಾಗುವುದಿಲ್ಲವೋ ಅಲ್ಲಿಯವರೆಗೆ ಅಂತ್ಯವಾಗಲು ಸಾಧ್ಯವಿಲ್ಲ ಏಕೆಂದರೆ ಅಂತ್ಯದ ಚಿಹ್ನೆಯು ಅತಿಯಾಗುವುದಾಗಿದೆ. ಮೂವರಲ್ಲಿಯೂ ಕಾರ್ಯದ ಪೋರ್ಸ್ ಇದೆ, ಆದರೆ ಫುಲ್‌ಫೋರ್ಸ್ ಇದ್ದರೆ ಕಾರ್ಯದ ಕೋರ್ಸ್ ಸಮಾಪ್ತಿಯಾಗುತ್ತದೆ.

ಭಕ್ತರ ಲೆಕ್ಕಪತ್ರದಲ್ಲಿ ಭಕ್ತಿಯ ಅಲ್ಪಕಾಲದ ಫಲವೇನು? ಭಕ್ತರಿಗೆ ಪ್ರಾಪ್ತಿಯಾಗಿದೆ ಅದರಲ್ಲಿ ನೋಡಿದೆವು - 75% ಭಕ್ತರಲ್ಲಿ ಕೇವಲ ತನ್ನ ಹೆಸರು, ಮಾನ್ಯತೆ ಮತ್ತು ಸ್ಥಾನಮಾನದಪ್ರತಿ ಸ್ವಾರ್ಥಸ್ವರೂಪದ ಭಕ್ತರಿದ್ದಾರೆ ಆದ್ದರಿಂದ ಅವರ ಕರ್ಮದ ಫಲದ ಖಾತೆಯು ಸಮಾಪ್ತಿಯಾಗಿರುತ್ತದೆ. ತಂದೆಯು ಫಲವನ್ನು ಕೊಡುವ ಅವಶ್ಯಕತೆಯಿಲ್ಲ. ಉಳಿದಂತೆ 25% ಭಕ್ತರು ನಂಬರ್‌ವಾರ್ ಲಗನ್ನಿನ ಕಾರಣ ಭಕ್ತಿಯನ್ನು ಮಾಡುತ್ತಿದ್ದಾರೆ.ಅವರ ಭಕ್ತಿಯ ಫಲವು ಇದೇ ಹಳೆಯ ಪ್ರಪಂಚದಲ್ಲಿ ಪ್ರಾಪ್ತಿಯಾಗುತ್ತದೆ ಏಕೆಂದರೆ ಈಗ ಭಕ್ತಿಯ ಖಾತೆಯು ಅರ್ಧಕಲ್ಪಕಾಲಕ್ಕಾಗಿ ಸಮಾಪ್ತಿಯಾಗಬೇಕು. ಅವರ ಯಾವ ಗತಿವಿಧಿಯನ್ನು ನೋಡಿದೆವು? ಭಕ್ತರಿಗೂ ಸಹ ತಮ್ಮ ಭಕ್ತಿಯ ಫಲವಾಗಿ ಈಗೀಗ ಮಾಡಿದೆವು, ಈಗೀಗ ಸಿಕ್ಕಿತು ಅರ್ಥಾತ್ ಅಲ್ಪಕಾಲದ ಲಗನ್ನಿನ ಫಲವು ಈಗಲೇ ಅಲ್ಪಕಾಲದಲ್ಲಿ ಪ್ರಾಪ್ತಿ ಯಾಗಿಬಿಡುತ್ತದೆ, ಭವಿಷ್ಯಕ್ಕಾಗಿ ಜಮಾ ಆಗುವುದಿಲ್ಲ. ಭಕ್ತರ ಪ್ರಾಪ್ತಿಯ ರೂಪವು ಹೀಗಿರುತ್ತದೆ - ಹೇಗೆ ಮಳೆಗಾಲದಲ್ಲಿ ಇರುವೆಗಳಿಗೆ ರೆಕ್ಕೆಗಳು ಬರುತ್ತವೆ ಮತ್ತು ಅವು ಬಹಳ ಖುಷಿಯಲ್ಲಿ ಹಾರಲು ತೊಡಗಿಬಿಡುತ್ತದೆ ಆದರೆ ಆ ಅಲ್ಪಕಾಲದ ಇಂಧನವು ಅದೇ ಸೀಜನ್ನಿನಲ್ಲಿಯೇ ಸಮಾಪ್ತಿ ಮಾಡಿಬಿಡುತ್ತದೆ. ಹೇಗೆ ಅಲ್ಲಿಯೇ ಪ್ರಾಪ್ತಿ ಮತ್ತು ಅಲ್ಲಿಯೇ ಸಮಾಪ್ತಿ ಯಾಗುತ್ತದೆ ಹಾಗೆಯೇ ಈಗಿನ ಭಕ್ತರು ಅಂದರೆ ಕಲಿಯುಗೀ ತಮೋ ಪ್ರಧಾನ ಭಕ್ತರು ಅಲ್ಪಕಾಲದ ಫಲದ ಪ್ರಾಪ್ತಿಯಲ್ಲಿ ಖುಷಿಯಾಗುವವರಾಗಿದ್ದಾರೆ. ಆದ್ದರಿಂದ ಅದರ ಫಲದ ಪ್ರಾಪ್ತಿಯ ಕಾರ್ಯವು ಡ್ರಾಮಾನುಸಾರವಾಗಿ ಸಮಾಪ್ತಿಯಾಗಿರುತ್ತದೆ. ಕೇವಲ 5% ಪ್ರಾಪ್ತಿಯ ಕಾರ್ಯವು ಈಗ ಉಳಿದುಕೊಂಡಿದೆ, ಈಗ ಅದು ಅತಿ ಅರ್ಥಾತ್ ಫುಲ್‌ಫೋರ್ಸ್ ನಿಂದ ಕಿರುಚಾಡುತ್ತಾರೆ. ಅದರಲ್ಲಿಯೂ ವಿಶೇಷವಾಗಿ ಶಕ್ತಿಯರನ್ನು ಕರೆಯುತ್ತಾರೆ - 'ವರದಾನವನ್ನು ಕೊಡಿ, ಶಕ್ತಿಯನ್ನು ಕೊಡಿ, ಸಾಹಸ ಮತ್ತು ಧೈರ್ಯವನ್ನು ಕೊಡಿ'. ಈಗ ಇದು ಅತಿಯಲ್ಲಿ ಹೋಗಿ ಮತ್ತೆ ಸಮಾಪ್ತಿಯಾಗುವಂತದ್ದಿದೆ. ಅಂದಮೇಲೆ ಭಕ್ತರ ಲೆಕ್ಕಪತ್ರದ ರಿಜಿಸ್ಟರ್ ಸಮಾಪ್ತಿಯಾಗಿಬಿಟ್ಟಿದೆ. ಅಲ್ಪಸ್ವಲ್ಪವೇನೋ

ಉಳಿದುಕೊಂಡಿದೆ ಅದು ಈಗೀಗ ಕರ್ಮ ಮತ್ತು ಈಗೀಗ ಫಲದ ರೂಪದಲ್ಲಿ ಸಮಾಪ್ತಿಯಾಗಿಬಿಡುತ್ತದೆ. ಇದು ಭಕ್ತರ ಸಮಾಚಾರವಾಗಿತ್ತು.

ಎರಡನೆಯದು ಯಾದವ ಸೇನೆಯ ಸಮಾಚಾರ, ಅವರ ಲೆಕ್ಕಪತ್ರದಲ್ಲಿ ಏನನ್ನು ನೋಡಿದೆವು? ಪ್ರತೀ ಹೆಜ್ಜೆಯಲ್ಲಿ ಅವರಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ನೋಡಿದೆವು. ವೇಗವನ್ನು ತೀವ್ರಗೊಳಿಸಲು ಬಹಳ ಚಾತ್ರಕರಾಗಿರುವುದನ್ನು ನೋಡಿದೆವು ಆದರೆ ವೇಗವನ್ನು ಎಷ್ಟು ತೀವ್ರ ಮಾಡುತ್ತಾರೆಯೋ ಅಷ್ಟೇ ಪ್ರಶ್ನಾರ್ಥಕ ಚಿಹ್ನೆಯ ಗೋಡೆಯು ಮತ್ತೆ-ಮತ್ತೆ ಬರುವ ಕಾರಣದಿಂದ ವೇಗವನ್ನು ತೀವ್ರ ಮಾಡಲು ಆಗದಂತಾಗಿದೆ. ಪ್ರಶ್ನಾರ್ಥಕ ಚಿಹ್ನೆಯು ಯಾವುದಾಗಿದೆ? ಒಂದಂತು ಆರಂಭ ಮಾಡುವುದು ಯಾರು? ನಾನು ಮಾಡುವುದೇ ಅಥವಾ ಅವರು ಮಾಡುವುದೇ? ಇನ್ನೊಂದು ಈಗ ಮಾಡುವುದೇ ಅಥವಾ ಯಾವಾಗ ಮಾಡುವುದು? ಮೂರನೆಯದು - ಇದರ ಫಲಿತಾಂಶವೇನಾಗುತ್ತದೆ? ಈ ರೀತಿ ಆಗಾಗ ಕ್ರೋಧಾಗ್ನಿಯು ಪಜ್ವಲಿತವಾಗುತ್ತದೆ, ಮತ್ತೆ ಏನಾಗುತ್ತದೆಯೋ ಎಂಬ ಸಂಕಲ್ಪವೆಂಬ ನೀರನ್ನು ಸಿಂಪಡಿಸುತ್ತಾ ಅಗ್ನಿಯನ್ನು ಶೀತಲ ಮಾಡಿಬಿಡುತ್ತಾರೆ. ನಾಲ್ಕನೆಯ ಪ್ರಶ್ನೆ- ಇದೆಲ್ಲವನ್ನು ಮಾಡಿಸುವವರು ಯಾರು, ಪ್ರೇರಕರು ಯಾರಾಗಿದ್ದಾರೆ? ಇದರಲ್ಲಿ ಗೊಂದಲವಾಗಿಬಿಡುತ್ತಾರೆ. ಅವರ ಯಾವ ಗತಿವಿಧಿಯನ್ನು ನೋಡಿದೆವು? ತಮ್ಮನ್ನು ತಾವೇ ತಿಳಿದುಕೊಳುತ್ತಿರಲಿಲ್ಲ. ಹೋಶ್ ಮತ್ತು ಜೋಶ್ (ಪ್ರಜ್ಞಾವಸ್ಥೆ ಮತ್ತು ಹುರುಪು) - ಇದೇ ದ್ವಂದ್ವದಲ್ಲಿದ್ದಾರೆ ಆದ್ದರಿಂದ ಸ್ವಯಂನೊಂದಿಗೂ ಬೇಸರವಾಗಿಬಿಡುತ್ತಾರೆ. ಏಕಾಂತವಾಸಿಯಾಗಬೇಕೆಂದು ಬಯಸುತ್ತಾರೆ ಆದರೆ ಬುದ್ಧಿಯು ಏಕಾಗ್ರವಾಗುವುದಿಲ್ಲ. ಆದ್ದರಿಂದ ಮತ್ತೆಮತ್ತೆ ಪ್ರಜ್ಞಾವಸ್ಥೆಯಲ್ಲಿ ಬಂದು ಬಿಡುತ್ತಾರೆ. ಬಹಳ ವೇಗದಿಂದ ಯೋಜನೆಯನ್ನು ತಯಾರು ಮಾಡುತ್ತಾರೆ. ಪೂರ್ಣತಯಾರಿಯನ್ನೂ ಮಾಡುತ್ತಾರೆ. ಸಮಯ, ಸೈನ್ಯ, ಶಸ್ತ್ರ ಮತ್ತು ಸ್ಥಾನವೆಲ್ಲವನ್ನೂ ಸೆಟ್ ಮಾಡಿಬಿಡುತ್ತಾರೆ. ಈಗ ಆಯಿತೆಂದರೆ ಆಯಿತು ಎಂದೇ ತಿಳಿಯುತ್ತಾರೆ. ಬಹಳ ತೀವ್ರಗತಿಯ ತಯಾರಿಯಲ್ಲಿರುತ್ತಾರೆ ಆದರೆ ಅಂತಿಮ ಪ್ರತ್ಯಕ್ಷತೆಯ ಸಮಯದಲ್ಲಿ ಗೊಂದಲವೆಂಬ ಸಿಗ್ನಲ್ ಬಂದುಬಿಡುತ್ತದೆ. ಆದ್ದರಿಂದ ಅವರ ತಯಾರಿಯಲ್ಲಿ ಕೇವಲ ಪ್ರೇರಕನ ಪ್ರೇರಣೆಯಲ್ಲಿ ಒಂದು ಸೆಕೆಂಡಿನ ವ್ಯತ್ಯಾಸವಿದೆ. ತಯಾರಿಯಾಗಿರುತ್ತದೆ ಆದರೆ ಒಂದುಸೆಕೆಂಡಿನ ಪ್ರೇರಣೆಯ ನಿರೀಕ್ಷಣೆಯಲ್ಲಿದ್ದಾರೆ. ಅವರ ಗತಿವಿಧಿಯು ಸೆಕೆಂಡಿನವರೆಗೂ ತಲುಪಿದೆ. ತಯಾರಿ ಮಾಡುವುದನ್ನು ಸಮಾಪ್ತಿ ಮಾಡಿ ನಿರೀಕ್ಷಣೆ ಮಾಡುತ್ತಿದ್ದಾರೆ. ಅಂದಮೇಲೆ ಅವರ ಲೆಕ್ಕಪತ್ರದ ಸಂಪನ್ನತೆಯ ತಯಾರಿಯನ್ನು ನೋಡಿದೆವು. ಈಗ ಕೇವಲ ಒಂದು ಕಾರ್ಯದಲ್ಲಿ ತೊಡಗಿದ್ದಾರೆ - ರಿಫೈನ್ ಆಗಿದೆ ಆದರೆ ತನ್ನ ವಿವೇಕದ ಮೂಲಕ ತನ್ನ ತಯಾರಿಯನ್ನು ಫೈನಲ್ ಮಾಡುತ್ತಿದ್ದಾರೆ. ಈಗ ಫೈನಲ್ ಮಾಡುವ ಒಂದು ಫೈಲ್ ಉಳಿದುಕೊಂಡಿದೆ. ಇದು ಯಾದವರ ಸಮಾಚಾರವಾಗಿತ್ತು. ಈಗ ತಮ್ಮದನ್ನು ಕೇಳುವ ಇಚ್ಛೆಯಿದೆಯೇ?

ಪ್ರೇರಣೆಯನ್ನು ತೆಗೆದುಕೊಳ್ಳುವವರಂತು ತಯಾರಾಗಿದ್ದಾರೆ ಆದರೆ ಪ್ರೇರಣೆಯನ್ನು ತೆಗೆದುಕೊಳ್ಳುವವರ ಗತಿಯೇನಾಗಿದೆ? ಹೇಳಿಕೆಯಿದೆ- ಕೊಡುವವರು ಕೊಡುತ್ತಾರೆ. ತೆಗೆದುಕೊಳ್ಳುವವರು ಸುಸ್ತಾಗಿಬಿಟ್ಟರು'. ಆದರೆ ಈ ಮಾತಿನಲ್ಲಿ ತೆಗೆದುಕೊಳ್ಳುವವರಿಗೆ ಸಿಗದಿರುವ ಕಾರಣದಿಂದ ಸುಸ್ತಾಗುತ್ತಿದ್ದಾರೆ. ತೆಗೆದುಕೊಳ್ಳುವವರು ತೆಗೆದುಕೊಳ್ಳುವುದಕ್ಕಾಗಿ ತಯಾರಾಗಿದ್ದಾರೆ ಮತ್ತು ಕೊಡುವವರು ಈಗಿನವರೆಗೂ ಸ್ವಯಂಗಾಗಿಯೇ ತೊಡಗಿದ್ದಾರೆ. ಅಂದಮೇಲೆ ಬ್ರಹ್ಮಾಮುಖ ವಂಶಾವಳಿ ಬ್ರಾಹ್ಮಣರ ಲೆಕ್ಕಪತ್ರ ವೇನಾಯಿತು, ಅದನ್ನು ತಾವು ತಿಳಿದಿದ್ದೀರಾ ಅಥವಾ ತಿಳಿಸಬೇಕಾಗಿದೆಯೇ? ಬಾಹ್ಮಣರ ರಿಜಿಸ್ಟರ್‌ನಲ್ಲಿ ಯಾವ ವಿಶೇಷತೆಯನ್ನು ನೋಡಿದೆವು? ವಿಶ್ವಪರಿವರ್ತನೆ ಅಥವಾ ವಿಶ್ವಕಲ್ಯಾಣದ ಶುಭಭಾವನೆಯು ಮೆಜಾರಿಟಿ ಯವರಲ್ಲಿ ಇಮರ್ಜ್ ಆಗಿದೆ ಆದರೆ ಹೇಗೆ ಯಾದವರ ವೇಗವು ನಡೆಯುತ್ತಾ-ತಿರುಗಾಡುತ್ತಾ ಪ್ರಶ್ನಾರ್ಥಕ ಚಿಹ್ನೆಯಾಗಿರುವ ಕಾರಣದಿಂದ ತೀವ್ರಗೊಳ್ಳುತ್ತಿಲ್ಲವೋ ಹಾಗೆಯೇ ಬ್ರಾಹ್ಮಣರ ಶ್ರೇಷ್ಠಭಾವನೆಯು ಪ್ರತ್ಯಕ್ಷಫಲದ ಪ್ರಾಪ್ತಿಯಾಗುವಂತದ್ದಾಗಿದೆ. ಅಂದಮೇಲೆ ಮಧ್ಯದಲ್ಲಿ ಯಾವುದಾದರೊಂದು ರಾಯಲ್ ರೂಪದ ಕಾಮನೆಯು ಶುಭಕಾಮನೆಯನ್ನು ಮರ್ಜ್ ಮಾಡಿಬಿಡುತ್ತದೆ. ಬ್ರಾಹ್ಮಣರ ಗತಿವಿಧಿಯಲ್ಲಿ ಶುಭಭಾವನೆ ಮತ್ತು ರಾಯಲ್ ರೂಪದ ಕಾಮನೆ - ಇವೆರಡರಲ್ಲಿ ಕೈಚಳಕ ನಡೆಯುತ್ತಿದೆ. ಹೇಗೆ ಸಂಪೂರ್ಣವಾಗಿರುವ ಹಣ್ಣನ್ನು ಪಕ್ಷಿಯು ಸಮಾಪ್ತಿ ಮಾಡಿಬಿಡುತ್ತದೆಯೋ ಹಾಗೆಯೇ ಭಾವನೆಯಿಂದ ಪ್ರಾಪ್ತಿಯಾಗಿರುವ ಫಲವನ್ನು ಕಾಮನೆಯೆಂಬ ಪಕ್ಷಿಯು ಸಮಾಪ್ತಿ ಮಾಡಿಬಿಡುತ್ತದೆ.

ಅಂದಮೇಲೆ ಬ್ರಾಹ್ಮಣರ ಪರಿವರ್ತನೆ ಮಾಡುವ ವಿಧಿಯಲ್ಲಿ ಸಿದ್ಧಿಸ್ವರೂಪರಾಗದಿರುವ ಕಾರಣದಿಂದ ಭಾವನೆಗೆ ಬದಲಾಗಿ 'ಕಾಮನೆ'ಯಾಗಿಬಿಡುತ್ತದೆ. ಆದ್ದರಿಂದ ಪುರುಷಾರ್ಥವು ಜ್ವಾಲಾ ಸ್ವರೂಪವಾಗುತ್ತಿಲ್ಲ. ಬ್ರಾಹ್ಮಣರ ಜ್ವಾಲಾರೂಪವು ವಿನಾಶಜ್ವಾಲೆಯನ್ನು ಪ್ರಜ್ವಲಿತಗೊಳಿಸುತ್ತದೆ. ಆದ್ದರಿಂದ ಬ್ರಾಹ್ಮಣರ ಲೆಕ್ಕಪತ್ರದಲ್ಲಿ ಈಗ ಲಾಸ್ಟ್ ಸೋ ಫಾಸ್ಟ್ ಪುರುಷಾರ್ಥವು ಜ್ವಾಲಾರೂಪವಾಗುವುದಷ್ಟೇ ಉಳಿದು ಕೊಂಡಿದೆ. ಯಾದವರ ಕಾರ್ಯವು ಯಾವರೀತಿ ಸಂಪನ್ನವಾಗಿಬಿಟ್ಟಿದೆ, ಪಾಂಡವರ ಕಾರ್ಯವು ಸಂಪನ್ನವಾಗುವುದಿದೆ. ಪಾಂಡವರ ಕಾರಣದಿಂದ ಯಾದವರು ನಿಂತಿದ್ದಾರೆ. ಪಾಂಡವರ ಶ್ರೇಷ್ಠಸ್ಥಾನ, ಆತ್ಮಿಕ ಸ್ಥಿತಿಯು ಯಾದವರ ಬೇಸರವಾಗುವ ಪರಿಸ್ಥಿತಿಯನ್ನು ಸಮಾಪ್ತಿ ಮಾಡಿಬಿಡುತ್ತದೆ. ಅಂದಮೇಲೆ ತಮ್ಮ ಸ್ಥಾನದಿಂದ ಬೇಸರವಾಗುವ ಆತ್ಮರಿಗೆ ಶಾಂತಿ ಮತ್ತು ಸುಖದ ವರದಾನವನ್ನು ಕೊಡಿ. ತಿಳಿಯಿತೆ? ಮೂವರ ಲೆಕ್ಕಪತ್ರ ವನ್ನು ಕೇಳಿಸಿಕೊಂಡಿರಾ? ಒಳ್ಳೆಯದು-

**ಇಂತಹ ಜ್ವಾಲಾ ಸ್ವರೂಪ ಸರ್ವವಿನಾಶಿ ಕಾಮನೆಗಳನ್ನು ಶ್ರೇಷ್ಠ ಮತ್ತು ಶುಭ ಭಾವನೆಯಲ್ಲಿ ಪರಿವರ್ತನೆ ಮಾಡುವಂತಹ, ಭಕ್ತರ ಅಲ್ಪಕಾಲದ ಅಂತಿಮಫಲದ ಮಹಾದಾನಿ, ವರದಾನಿ ರೂಪದಲ್ಲಿ ಕೊಡುವಂತಹ ದಾತಾ ಮತ್ತು ವರದಾತರು, ತಂದೆಯ ಸಮಾನ ಕೊಡುವಂತಹ ಮತ್ತು ಸರ್ವರ ಮನೋಕಾಮನೆಗಳನ್ನು ಸಂಪನ್ನ ಮಾಡುವಂತಹ ಸಂಪೂರ್ಣ ಫರಿಸ್ತಾ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ಅವ್ಯಕ್ತ ಮುರಳಿ 02-02-1976--ಪಾರ್ಟ್ -2

***ಭಕ್ತರು ಮತ್ತು ಪಾಂಡವರ ಲೆಕ್ಕಪತ್ರ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಾಪ್‌ದಾದಾರವರೊಂದಿಗೆ ಹೊಸ ಪ್ರಪಂಚ ಸ್ಥಾಪನಾ ಕಾರ್ಯದಲ್ಲಿ ಸಹಯೋಗಿಯಾಗುವ ಮುಖ ವಂಶಾವಳಿ ಬ್ರಾಹ್ಮಣಾತ್ಮನು.

2. ನಾನು ಕಾಮನೆಗಳನ್ನು ಶುಭ ಭಾವನೆಯಲ್ಲಿ ಪರಿವರ್ತನೆ ಮಾಡಿಕೊಂಡಿರುವ ಪರಿವರ್ತನಾ ಸ್ವರೂಪ.

3. ನಾನು ವಿನಾಶಜ್ವಾಲೆಯನ್ನು ಪ್ರಜ್ವಲ ಮಾಡುವ ಜ್ವಾಲಾಸ್ವರೂಪ.

4. ನಾನು ನನ್ನ ಶ್ರೇಷ್ಠ ಆತ್ಮಿಕ ಸ್ವಮಾನಗಳ ಸ್ಥಿತಿಯಿಂದ ಯಾದವರ ಬೇಸರ ಪರಿಸ್ಥಿತಿಯನ್ನು ಸಮಾಪ್ತಿ ಮಾಡಿದ್ದೇನೆ.

5. ನಾನು ವಿಶ್ವದಲ್ಲಿ ಬೇಸರದಲ್ಲಿರುವ ಆತ್ಮಿಕ ಸಹೋದರರಿಗೆ ಶಾಂತಿ, ಸುಖದ ವರದಾನವನ್ನು ಕೊಟ್ಟಿದ್ದೇನೆ.